



## ಪುಟಾಣಿ ತೆಂಗಿನಕಾಯಿ

ಸಾಮಾನ್ಯವಾಗಿ ನಾವು ತೆಂಗಿನಕಾಯಿ ಖರೀದಿಸಲು ಹೋದಾಗ ಮಾರಾಟ ಮಾಡುವವರ ಬಳಿ ಚೌಕಾಸಿ ಮಾಡಿ ರಾಶಿ ಹಾಕಿದ ಕಾಯಿಗಳಲ್ಲಿ ಆದಷ್ಟೂ ದೊಡ್ಡ ಕಾಯಿಯನ್ನೇ ಹುಡುಕುತ್ತೇವೆ. ಹಾಗಾಂತ, ಚಿತ್ರದಲ್ಲಿ ಕಾಣುತ್ತಿರುವ ಈ ಚಿಕ್ಕ ತೆಂಗಿನಕಾಯಿಯು ಮಾರಾಟ ಮಾಡುವವರ ಬಳಿಯೇ ಸಿಗುತ್ತೆ ಅಂತಿಲ್ಲ. ಇಷ್ಟು ಚಿಕ್ಕ ಗಾತ್ರದ, ಅಂಗೈಯಲ್ಲಿ ಹಿಡಿಯುವಷ್ಟು ಚಿಕ್ಕದಾದ ತೆಂಗಿನ ಕಾಯಿ ಸಾಮಾನ್ಯವಾಗಿ ಕಂಡುಬರುವುದು ತೆಂಗಿನ ತೋಟಗಳಲ್ಲಿ ಅಥವಾ ಮನೆಯ ಹಿತ್ತಲಲ್ಲಿ.

ತೋಟದಲ್ಲಿ ಅಥವಾ ಮನೆಯ ಹಿತ್ತಲ ತೆಂಗಿನ ಮರಗಳ ಬುಡದಲ್ಲಿ (ಎಳೆಯ ನೀರು ಕಾಯಿ ಆಗುವುದಕ್ಕೂ ಮುಂಚೆ) ಈ ಕಾಯಿಗಳು ಬಿದ್ದಿರುತ್ತವೆ. ಎಳೆಯ ಈ ಪೀಚುಕಾಯಿಯನ್ನು ಯಾವ ಹುಳಹುಪ್ಪಟೆ ತಿನ್ನದಿದ್ದರೆ, ಅವುಗಳಲ್ಲಿದ್ದ ಅಲ್ಪಸ್ವಲ್ಪ ನೀರು ಕಾಯಿ ಒಣಗಿದ ನಂತರ ಇಲ್ಲವಾದಲ್ಲಿ ಒಣ ಕೊಬ್ಬರಿ ಅಥವಾ ಗಿಟುಕ ನಮಗೆ ಸಿಗುತ್ತದೆ.

ಜಾಗ್ರತೆಯಿಂದ ಮೇಲಿನ ಕವಚ ಬಿಡಿಸಿದರೆ ಪುಟ್ಟ ತೆಂಗಿನಕಾಯಿ ಸಿಗುತ್ತದೆ. 0.6 ಸೆ.ಮೀ. ಉದ್ದದ ಮತ್ತು 0.13 ಸುತ್ತಳತೆಯ ಈ ಕಾಯಿ ಅಡುಗೆಗೆ ಉಪಯೋಗಿಸಲು ಯೋಗ್ಯವಲ್ಲ. ಬದಲಿಗೆ ಶೋ ಕೇಸ್‌ನಲ್ಲಿ ಆಟಿಕೆ ಸಾಮಾನುಗಳೊಂದಿಗೆ ಸಂಗ್ರಹಿಸಲು ಹೆಚ್ಚು ಸೂಕ್ತ.

–ರಘುನಾಥರಾವ್ ತಾಪ್ಸೆ, ದಾವಣಗೆರೆ




## ಪಿಕ್ಚರ್ ಕಾರ್ಡ್ ಠಸ್ಸೆ

ಈಚೆಗೆ 'ಸುಧಾ' ವಾರಪತ್ರಿಕೆಯಲ್ಲಿ 'ಮೈಸೂರಿನ ಹಿರಿಮೆಗೆ ಪಿಕ್ಚರ್ ಕಾರ್ಡ್ ಠಸ್ಸೆ' ಲೇಖನ ಓದುತ್ತಿದ್ದಂತೆ ನನ್ನ ಬಾಲ್ಯ ನೆನಪಾಯಿತು. ಅದು, ಸುಮಾರು ಐವತ್ತು ವರ್ಷ ಹಳೆಯದು. ನನ್ನಣ್ಣಂದಿರು ಮೈಸೂರು ಕಾಲೇಜಿನಲ್ಲಿ ಓದುತ್ತಿದ್ದಾಗ, ಅವರು ಕಾಲೇಜಿನ ಪ್ರವಾಸಕ್ಕೆ ಉತ್ತರ ಭಾರತದ ಕಡೆ ಹೋದಾಗ ಕಪ್ಪು ಬಿಳುಪಿನ ಪಿಕ್ಚರ್ ಕಾರ್ಡ್‌ಗಳನ್ನು ತಂದುಕೊಟ್ಟಿದ್ದರು.

ತಾಜ್ ಮಹಲ್, ಕೆಂಪು ಕೋಟೆ ಮುಂತಾದ ಚಾರಿತ್ರಿಕ ತಾಣಗಳ ಚಿತ್ರ ನೋಡಿದಾಗ ಅದನ್ನು ನೋಡಿದಷ್ಟೇ ಸಂತೋಷವಾಗುತ್ತಿತ್ತು. ನಂತರ ನನ್ನ ಅಣ್ಣ ಜರ್ಮನಿಗೆ ಹೋದಾಗ ಅಲ್ಲಿಂದ ಇಂಥ ಕಾರ್ಡ್‌ಗಳಲ್ಲಿಯೇ ನನಗೆ ಪತ್ರವನ್ನು ಬರೆಯುತ್ತಿದ್ದ. ಈ ಲೇಖನವನ್ನು ಓದಿದ ತಕ್ಷಣ ನಾನು ನನ್ನ ಹಳೆಯ ಟ್ರಂಕ್ ತೆಗೆದು ಹುಡುಕಿದಾಗ ಸಿಕ್ಕ ಕೆಲ ಫೋಟೊಗಳಿವು.

–ವೀಣಾ ಶಂಕರ್, ಬೆಂಗಳೂರು

## ಸುಂದರ ಮಾನಸ್ತಂಭ

ಕರ್ನಾಟಕದ ಸುಪ್ರಸಿದ್ಧ ಜೈನ ಕ್ಷೇತ್ರ, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹುಂಚದಲ್ಲಿದೆ. ಪಾರ್ಶ್ವನಾಥ ಬಸದಿ. ಇದು ಸುಮಾರು 8ನೇ ಶತಮಾನದ್ದು. ಎಲ್ಲಾ ಜೈನ ದೇವಸ್ಥಾನಗಳಲ್ಲೂ ಕಂಡುಬರುವಂತೆ ಈ ದೇಗುಲದ ಮುಂಭಾಗದಲ್ಲೂ ಇರುವ 'ಮಾನ ಸ್ತಂಭ' ಅತ್ಯಂತ ಆಕರ್ಷಕ. 24 ತೀರ್ಥಂಕರರ ಮೂರ್ತಿಗಳುಳ್ಳ ಈ ಮಾನಸ್ತಂಭ, ಮೂರು ಹಂತಗಳ ತಳಪಾಯದ ಮೇಲೆ ನಿರ್ಮಿತವಾಗಿದೆ. ಈ ಮಾನಸ್ತಂಭದ ತಳಹದಿಯಲ್ಲಿ ನಾಲ್ಕು ಆನೆಗಳ ಸುಂದರ ಕೆತ್ತನೆ ಇದೆ. ದೇಗುಲವನ್ನು ಕಾಯುವ ಬ್ರಹ್ಮದೇವ ಯಕ್ಷನ ಮೂರ್ತಿ ಕೂಡ ಈ ಮಾನಸ್ತಂಭದಲ್ಲಿ ಇದೆ.

–ಎಚ್.ಎಸ್. ನವೀನಕುಮಾರ್, ಹೊಸದುರ್ಗ

